ಶ್ರೀ ರಾಮಕೃಷ್ಣ ಹೆಗಡೆ (ಪಣಂಬ್ರಿ ಮಂತ್ರಿಗಳು).—

ಅ) ಸರ್ಕಾರಿ ಅಧಿಕಾರಿಗಳು ಆಯ್ಕೆ ನಿಯಮಗಳನ್ನು ಉಲ್ಲಂಘಿಸಿ ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿರಿಸಿದ್ದ ಸ್ಥಾನಗಳಿಗೆ ಪರಿಶಿಷ್ಟ ಜಾತಿಯಲ್ಲದವರನ್ನು ನೇಮಕಾತಿ ಮಾಡಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) 'ಅ' ಭಾಗದ ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರಿಸುವ ಅಗತ್ಯ ಉದ್ಭವಿಸುವುದಿಲ್ಲ.

ಮುಳ್ಳಮಾರಿ ಮೇಲ್ದಂಡೆ ಹಾಗೂ ಕೆಳದಂಡೆ ಅಮೃರ್ಜಾ ಕಾರಂಜಿ ಯೋಜನೆ ಬಗ್ಗೆ.

೭೦೭. ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳ್ಳಿ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳ್ಳಮಾರಿ ಮೇಲ್ದಂಡೆ, ಮುಳ್ಳಮಾರಿ ಕೆಳದಂಡೆ, ಅಮೃರ್ಜಾ ಬೆಣ್ಣಿತೋರಾ ಮತ್ತು ಕಾರಂಜಿ ಯೋಜನೆಗಳಿಗೆ ಮಂಜೂರು ನೀಡಲಾದ ದಿನಾಂಕಗಳಾವುವು ?

ಆ) ರ್ಗರಹಿನೇ ಇಸವಿ ಮಾರ್ಚ್ ಅಂತ್ಯದವರೆಗೆ ಈ ಯೋಜನೆಗಳ ಮೇಲೆ ಒಟ್ಟು ವ್ಯಯ ಮಾಡಲಾಗಿರುವ ಮೊಬಲಗೆಷ್ಟು ಮತ್ತು ಈ ಯೋಜನೆಗಳ ಪರಿಷ್ಕೃತ ಅಂದಾಜು ಮೊಬಲಗೆಷ್ಟು ?

ಇ) ಈ ಯೋಜನೆಗಳನ್ನು ಸಂಪನ್ಮೂಲದ ಕೊರತೆಯಿಂದಾಗಿ ಪರಿತ್ಯಜಿಸುವ ಯೋಜನೆ ಸರ್ಕಾರದಲ್ಲಿದೆಯೇ ? ಹಾಗಿಲ್ಲದಿದ್ದಲ್ಲಿ ಸರ್ಕಾರವು ಈ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೇ ಎತ್ತು ಯೋಜನೆಗಳನ್ನು ಪೂರ್ಣಗೊಳಿಸುವ ಕಾಲಾವಧಿ ಏನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಲಗತ್ತಿಸಿರುವ ಪಟ್ಟಿ ಕ್ರಮ ಸಂಖ್ಯೆ ೧ರಲ್ಲಿ ನಮೂದಿಸಲಾಗಿದೆ.

ಆ) ಲಗತ್ತಿಸಿರುವ ಪಟ್ಟಿ ಕ್ರಮ ಸಂಖ್ಯೆ ೨ ಮತ್ತು ೩ ರಲ್ಲಿ ನಮೂದಿಸಲಾಗಿದೆ.

ಇ) ಇಲ್ಲ. ಯೋಜನೆಗಳನ್ನು ಪೂರ್ಣಗೊಳಿಸುವ ಕಾಲಾವಧಿ ಲಗತ್ತಿಸಿರುವ ಪಟ್ಟಿಯ ಕ್ರಮ ಸಂಖ್ಯೆ ೪ ರಲ್ಲಿ ನಮೂದಿಸಲಾಗಿದೆ.

ವಿವರಗಳ ಪಟ್ಟಿ

ಕ್ರಮ ಸಂಖ್ಯೆ	ಯೋಜನೆಗಳ ವಿವರಗಳು	ಹಳ್ಳಿಪಟ್ಟಣ ಮೇಲ್ಪಡೆ ಯೋಜನೆ	ಹಳ್ಳಿಪಟ್ಟಣ ಕೆಳಪಡೆ ಯೋಜನೆ	ಅಮೃತಾನ್ ಯೋಜನೆ	ಬೆಟ್ಟ ತೋರಾ ಯೋಜನೆ	ಕಾರಂಜಾ ಯೋಜನೆ
೧	ಯೋಜನೆಗಳಿಗೆ ಮಂಜೂರು ನೀಡಲಾದ ದಿನಾಂಕಗಳು	೧೭-೮-೧೯೭೯	ಆಡಳಿತ ಮಂಜೂರಾತಿ ನೀಡಲಾಗಿಲ್ಲ	೭-೬-೧೯೭೮	ಆಡಳಿತ ಮಂಜೂರಾತಿ ನೀಡಲಾಗಿಲ್ಲ	೨೭-೧೧-೧೯೬೯
೨	೧೯೮೫ನೇ ಇಸವಿ ಮಾರ್ಚಿ ಅಂತ್ಯದ ವರೆಗೆ ವ್ಯಯ ಮಾಡಿರುವ ಮೊಬಲಗು (ಲಕ್ಷ ರೂ. ಗಳು)	೫೪೬	೩೪೪	೪೩೪	೬೧೬	೨೬೦೧
೩	ಯೋಜನೆಗಳ ಪರಿಷ್ಕೃತ ಅಂದಾಜು ಮೊಬಲಗು (ಲಕ್ಷ ರೂ. ಗಳು)	೧೯೩೫	೨೭೦೫	೨೫೧೦	೪೯೫೦	೬೮೦೦
೪	ಯೋಜನೆಗಳನ್ನು ಪೂರ್ಣಗೊಳಿಸುವ ಕಾಲಾವಧಿ (ತಾತ್ಕಾಲಿಕ)	೧೯೮೯-೯೦	ಎಂಟನೇ ಪಂಚ ವಾರ್ಷಿಕ ಯೋಜನಾವಧಿ	ಎಂಟನೇ ಪಂಚ ವಾರ್ಷಿಕ ಯೋಜನಾವಧಿ	೧೯೯೪-೯೫	ಎಂಟನೇ ಪಂಚ ವಾರ್ಷಿಕ ಯೋಜನಾವಧಿ